ಬಂದಿದ್ದರೂ ಪೋಲಿಯೋದಿಂದ ನರಳುತ್ತಿರುವ ಮಗ ಮಂಜ ನಡೆಯಲಾಗದೆ ತೆವಳುತ್ತಿದ್ದ. ಇನ್ನೊಬ್ಬರ ಆಸ್ರೆಯಿಲ್ಲದೆ ಒಂದ್ಹೆಜ್ಜೆಯನ್ನೂ ಮುಂದಿಡಲಾಗುತ್ತಿರಲಿಲ್ಲ ಮಂಜನಿಗೆ. ಗಂಡನನ್ನು ಕಳೆದುಕೊಂಡಿರುವ, ಕಣ್ಣೆದುರಿಗೆ ದುಡಿಯಲಾಗದ ಮಗ, ರಕ್ತ ಇರುವವರೆಗೂ ದುಡಿದು ಚಕ್ಕಳವಾಗಿರುವ ಈರಮ್ಮಜ್ಜಿ ಈಗ ಅಸಹಾಯಕಳಾಗಿದ್ದಳು. ಹಿಂದೆ ಕೊಡ್ತಿದ್ದ ವಿಧವಾವೇತನ ಮತ್ತು ಇತ್ತೀಚೆಗೆ ಸರ್ಕಾರದೋರು ಕೊಡುವ ಗೃಹಲಕ್ಷ್ಮೀ ಹಣ ಇವರನ್ನು ಕೈಹಿಡಿದಿತ್ತು. ಅನ್ನಭಾಗ್ಯ ಅನ್ನ ಕೊಡ್ತಿತ್ತು. ಇದ್ರಲ್ಲಿ ಆಸ್ಪತ್ರೆಗೋಗಾಕೆ, ಮಾತ್ರೆಗಿತ್ರೆ ತಗೋಣಕ್ಕೆ ಸರಿಯಾಗ್ತಿತ್ತು. ಇದ್ರು ನಡ್ವೆ ನಂಗೆ ಅದುನ್ನ ಮಾಡುಸ್ಕೊಡ್ತೀನಿ ಅಂತ ಅವ್ರು ಇವ್ರು ದುಡ್ಡು ಕಿತ್ಕಳ್ಳೋರು ಸುತ್ತಮುತ್ತ ಇದ್ರು. ಈರಮ್ಮಜ್ಜಿ ಜಮೀನು ಗೌಡ್ರ ಹೆಸ್ರಿಗೆ ಆಗ್ತ ಇದೆ ಎಂಬ ಸುಲಾಕು ತಿಳ್ಕಂಡ ನಂಜುಂಡಯ್ಯ ಈರಮ್ಮಜ್ಜಿ ಹತ್ರ ಬಂದು 'ಅದ್ನ ಸರ್ಮಾಡ್ತೀನಿ, ಇದುಕ್ಕೆ ಇಷ್ಟಾಗುತ್ತೆ, ಅದುಕ್ಕೆ ಅಷ್ಟಾಗುತ್ತೆ' ಅಂತ ಇರೋಬರೋ ದುಡ್ನೆಲ್ಲ ಕಿತ್ಕಂಡು ಹೋಗ್ತಿದ್ದ. ಇವತ್ತಾತದೆ, ನಾಳಿಕಾತದೆ ಅಂತ ಕಾದು ಕಾದು ಈರಮ್ಮಜ್ಜಿ ಕಣ್ಣುಗಳು ಮತ್ತಷ್ಟು ಮಂಜಾದ್ವು.

ಇದ್ರು ಜೊತ್ಗೆ ಇನ್ನೊಂದು ಸುದ್ದಿ ಈರಮ್ಮಜ್ಜಿ ಕಿವಿಗೆ ಬಿತ್ತು. 'ಮುಂದಿನ ತಿಂಗಳು ಗೃಹಲಕ್ಷ್ಮೀ ನಿಲ್ಲುಸ್ತಾರಂತೆ. ಈಗ ಎಲೆಕ್ಷನ್ ಮುಗುದ್‌ಮೇಲೆ ಎಲ್ಲಾನ್ ಬಂದ್ ಆಗುತ್ತೆ. ಇನ್ನಾರು ತಿಂಗಳಷ್ಟೇ ಅನ್ನಭಾಗ್ಯನೂ ಕೊನೆಯಾಗುತ್ತೆ' ಎಂದು ಅಳ್ಳಿಮರ್ದ ಕೆಳ್ಗೆ ಕೂತಿರೋ ಜನ ಹೇಳ್ವಾಗ ಈರಮ್ಮಜ್ಜಿ ನಡುಗಿಹೋಗುತ್ತಿದ್ಲು. ಇಲ್ಲೀವರ್ಗೂ ಯಂಗೋ ಇವೆಲ್ಲಾ ಕೈಹಿಡ್ದು ನಡುಸ್ತಿದ್ವು. ಮುಂದಕ್ಕೆ ಯೆಂಗಪ್ಪ ಸಿವ್ನೇ ಅಂತ ಶಿವನ ಮೇಲೆ ಹಾಕಿ, ನಡೆಯಕ್ಕಾದಿದ್ರೂ ಮಂಜನ ಎಳ್ಕಂಡು ಅವರಿವ್ರನ್ನು ಹಿಡ್ಕಂಡು ನ್ಯಾಯುಕ್ಕೆ ಓಡಾಡ್ತಿದ್ಲು. ಊರ್‍ನ ಗೌಡನನ್ನು ಕಂಡ್ಲು. ಗೌಡ 'ಸಾಯೋ ವಯಸ್ನಾಗೆ ನಿನಗ್ಯಾಕೆ ಮುದ್ಕಿ ಈ ಹೇರಾಟ. ಹೋಗಿ ನೆಮ್ದಿಯಾಗಿ ಸಾಯೋಗು' ಅಂದು ಕಳುಸ್ಬಿಟ್ಟ. ಮೊದ್ಲೇ ದಣ್ದಿದ್ದ ಈರಜ್ಜಿಗೆ ನಂಜುಂಡಯ್ಯ 'ತಾಸಿಲ್ದಾರ್‍ನ ನೋಡಾಣ, ಎಸಿ



ನೋಡಾಣ, ಡಿಸಿ ನೋಡಾನ' ಅಂತ ಆಸೆಯುಟ್ಸಿ ದಿನ ದುಡ್ಡು ಕಿತ್ಕಂಡೋಗಿ ಇಸ್ಪೀಟೆಲೆಗೆ ಹಾಕಿ ಸೋತು ಬತ್ತಿದ್ದ. 'ನಾಳೆ ಸಿಗ್ತರೆ, ನಾಡ್ದು ಸಿಗ್ತರೆ. ಅವ್ರೇನೂ ನಮ್ಮಾವನ ಮಗ್ನ ಹೋಗಿತಕ್ಷಣ ಸಿಗಾಕೆ' ಅಂತ ಈರಮ್ಮಜ್ಜಿ ಬಾಯ್ನ ಮುಚ್ಚುಸ್ತಿದ್ದ. ಇಂಗಾದ್ರೆ ಕಾಲನೇ ಮುಗ್ದೋತದೆ ಅಂದ್ಕಂಡು, ನನ್ನದೆಂಗೋ ಜೀವ್ನ ಮುಗೀತು, ಈ ಕುಂಟ ಮಗ ಮುಂದೆ ಜೀವ್ನ ಹೇಗೆ ನಡೆಸುತ್ತಾನೋ ಎಂಬ ಆತಂಕ ಈರಮ್ಮಜ್ಜಿಗೆ ಮನೆ ಮಾಡಿತ್ತು. ಅದಕ್ಕೆ ಯಾರ್‍ನು ನಂಬ್ದೇ ಈ ಇಳಿವಯಸ್ಸಲ್ಲಿ ಮಂಜನನ್ನು ಎಳೆದುಕೊಂಡು ಮೂಡ್ಲಾಪುರ ತಾಲ್ಲೂಕು ಆಫೀಸಿಗೆ ಬಂದಿದ್ದಳು.

ಇರುವ ಒಂದೂವರೆ ಎಕರೆ ತನ್ನ ಹೆಸರಿಗೆ ಆದರೆ ತನ್ನ ಮಗನಿಗೆ ಒಂದಷ್ಟು ಆಸರೆ ಆಗ್ತದೆ. ಗೇಯ್ಮೆ ಮಾಡಕ್ಕಾಗ್ದಿದ್ರೂ ಯಾರ್‍ಗಾದ್ರೂ ಪಾಲ್ಗೆ ಕೊಡ್ಬೋದು. ದೇವ್ರೇನಾದ್ರೂ ಕಣ್ಬಿಟ್ಟು ಮಳೆಗಿಳೆ ಬಂದ್ರೆ ಬೆಳ್ಯೋ ದವಸ್ದಾಗೆ ಜೀವ್ನ ಸಾಗ್ತದೆ. ಏನಾರ ದೇವ್ರ ಶಾಪ ಆದ್ರೇ ಸರ್ಕಾರದ ಬರಪರಿಹಾರ ಯೋಜನೆಯಿಂದ ಒಂದಷ್ಟು ದುಡ್ಡು ಸಿಗ್ತದೆ. ಯಂಗೋ ನಡ್ದೋಗ್ತದೆ. ಜೀವ ಇರೋವರ್‍ಗೂ ನಡ್ಕೋಡೋದ್ರಾಯ್ತು... ಎಂಬುದಷ್ಟೇ ಅವಳ ಕೊನೆಯ ಆಸೆಯೂ ಆಸರೆಯೂ ಆಗಿತ್ತು. ಅದಕ್ಕಾಗಿ ತಾಲ್ಲೂಕಾಫೀಸಿಗೆ ವಾರಕ್ಕೊರಸತಿ ಮಂಜನನ್ನು ಎಳ್ಕೊಂಡು ಅಲೆದಾಡುತ್ತಿದ್ದಳು. ಒಂದಿನ ಆ ಈರಮ್ಮಜ್ಜಿ ಮತ್ತವಳ ಮಗ ಕಾಂತನ ಕಣ್ಣಿಗೆ ಬಿದ್ದರು. ಈರಮ್ಮಜ್ಜಿಯ ಸ್ಥಿತಿಯನ್ನು ಕಂಡ ಕಾಂತನಿಗೆ ತನ್ನವ್ವಳೇ ಕಣ್ಮುಂದೆ ಹಾದುಹೋದಳು. ಒಂದಿನ ಅವರನ್ನು ಕರೆದು 'ಏನೇನು' ಎಂದೆಲ್ಲಾ ವಿಚಾರಿಸಿದ್ದಕ್ಕೆ ಈರಮ್ಮಜ್ಜಿ ತನ್ನೆಲ್ಲಾ ಕಷ್ಟಗಳನ್ನು ಹೇಳಿಕೊಂಡಳು. ಅಲ್ಲೇ ನೆಲದಲ್ಲಿ ತೆವಳುತ್ತಿದ್ದ ಮಗ ಮಂಜನಿಗಾಗಿ ಇದನ್ನೆಲ್ಲಾ ಮಾಡುತ್ತಿರುವುದಾಗಿ ಹೇಳಿದಾಗ ಕಾಂತನ ಕಣ್ಣು ತುಂಬಿಕೊಂಡವು. ಏನಾದರೂ ಮಾಡಬೇಕೆಂದು ಯೋಚಿಸಿ ಪ್ಯೂನ್ ಕರಿಯಪ್ಪನನ್ನು ವಿಚಾರಿಸಿದಾಗ ಈರಮ್ಮಜ್ಜಿಗೆ ಸಂಬಂಧಿಸಿದ ಫೈಲ್ ರುದ್ರಮೂರ್ತಿಯ ಬಳಿ ಇರುವುದು ಗೊತ್ತಾಯಿತು. 'ಈಗಾಗಲೇ ಅದೇನ್ ಪ್ರೊಸೀಜರ್ ಮಾಡ್ಬೇಕೋ ಮಾಡಿ ರುದ್ರಮೂರ್ತಿನೂ,